ದಯೆ ತೋರುವವರಿಗೆ ಪರಮ ದಯಾಮಯನು (ಅಲ್ಲಾಹು) ದಯೆ ತೋರುತ್ತಾನೆ. ಭೂಮಿಯಲ್ಲಿರುವವರಿಗೆ ದಯೆ ತೋರಿರಿ. ಆಕಾಶದಲ್ಲಿರುವವನು ನಿಮಗೆ ದಯೆ ತೋರುತ್ತಾನೆ

ಅಬ್ದುಲ್ಲಾ ಬಿನ್ ಅಮ್ರ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ದಯೆ ತೋರುವವರಿಗೆ ಪರಮ
ದಯಾಮಯನು (ಅಲ್ಲಾಹು) ದಯೆ ತೋರುತ್ತಾನೆ. ಭೂಮಿಯಲ್ಲಿರುವವರಿಗೆ ದಯೆ ತೋರಿರಿ. ಆಕಾಶದಲ್ಲಿರುವವನು ನಿಮಗೆ ದಯೆ ತೋರುತ್ತಾನೆ." [صحيح] [رواه أبو داود والترمذي وأحمد]

ಇತರ ಜನರಿಗೆ ದಯೆ ತೋರುವವರಿಗೆ ಪರಮ ದಯಾಮಯನಾದ ಅಲ್ಲಾಹು ಎಲ್ಲಾ ವಸ್ತುಗಳನ್ನು ಒಳಗೊಳ್ಳುವಷ್ಟು ವಿಶಾಲವಾದ ತನ್ನ ದಯೆಯಿಂದ ದಯೆ ತೋರುತ್ತಾನೆಂದು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿವರಿಸುತ್ತಿದ್ದಾರೆ. ನಂತರ, ಭೂಮಿಯಲ್ಲಿರುವ ಮನುಷ್ಯರು, ಪ್ರಾಣಿಗಳು, ಹಕ್ಕಿಗಳು ಮುಂತಾದ ಎಲ್ಲಾ ಜೀವಿಗಳ ಮೇಲೆ ದಯೆ ತೋರಬೇಕೆಂದು ಅವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಆದೇಶಿಸುತ್ತಾರೆ. ಅದಕ್ಕಿರುವ ಪ್ರತಿಫಲವಾಗಿ ಆಕಾಶದಲ್ಲಿರುವ ಅಲ್ಲಾಹು ಅವರಿಗೂ ದಯೆ ತೋರುತ್ತಾನೆ.

http://www.sunnah.global/hadeeth/kn/show/8289